ಫ್ಯಾಕ್ಸ್ : (91-080)23332521 ದೂರವಾಣಿ : 23332521/23330153(259)

# ಕೃಷಿ ವಿಶ್ವವಿದ್ಯಾನಿಲಯ

ಆಡಳಿತಾಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು – 560 065

ಸಂಖ್ಯೆ:ಆಕ/ ಕಾನೂನು ವಿಭಾಗ/ಸರ್ಕಾರಿ ಪತ್ರ/276/2019-20 ದಿನಾಂಕ: 13-5-2019

## ಸುತ್ತೋಲೆ

**ವಿಷಯ:** ನ್ಯಾಯಾಲಯಗಳು ತೀರ್ಪು ನೀಡಿದ ತರುವಾಯ ದೃಢೀಕೃತ ಪ್ರತಿಯನ್ನು ಪಡೆಯಲು ಅನುಸರಿಸಬೇಕಾದ ಕ್ರಮದ ಬಗ್ಗೆ.

**ಉಲ್ಲೇಖ:**
1. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 127 ಎಸ್ ಎಫ್ ಎಸ್ 2015 ದಿನಾಂಕ 2/3/2019
2. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರದ ಸಂಖ್ಯೆ ಕೃಇ 31 ಕೃವಿಬಿ 2018 ದಿನಾಂಕ 3-4-2019.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 10/5/2019.

><<>><<>><

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯ /ಕರ್ನಾಟಕ ಉಚ್ಚ ನ್ಯಾಯಾಲಯ, ಕೇಂದ್ರ ಆಡಳಿತ ನ್ಯಾಯಾಮಂಡಳಿ/ ಕರ್ನಾಟಕ ಆಡಳಿತ ನ್ಯಾಯಮಂಡಳಿ/ ರಾಷ್ಟ್ರೀಯ ಹಸಿರು ಪೀಠ ಹಾಗೂ ಇತರೆ ಅಧೀನ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಅಂತಿಮ ತೀರ್ಮಾನವಾದ ನಂತರ ಸದರಿ ನ್ಯಾಯಾಲಯ/ನ್ಯಾಯಮಂಡಳಿಗಳ ವೆಬ್‌ಸೈಟಿನಿಂದ ಆದೇಶ/ತೀರ್ಮಾನದ ಪ್ರತಿಗಳನ್ನು ಸಂಬಂಧಪಟ್ಟ ನಿರ್ದೇಶನಾಲಯದ/ಕಛೇರಿಯ ಅಧಿಕಾರಿಗಳಿಂದ ಪಡೆದುಕೊಂಡು ವಿಳಂಬವಿಲ್ಲದೆ ಅವುಗಳನ್ನು ಪರಿಶೀಲಿಸಿ ಸದರಿ ಪ್ರಕರಣದಲ್ಲಿ ಅಂತಿಮ ತೀರ್ಮಾನವನ್ನು ಕೈಗೊಳ್ಳುವ ಕ್ರಮ ವಹಿಸತಕ್ಕದ್ದು.

ಒಂದು ವೇಳೆ ಆದೇಶ/ತೀರ್ಮಾನದ ಪ್ರತಿಗಳು ಸದರಿ ನ್ಯಾಯಾಲಯ /ನ್ಯಾಯ ಮಂಡಳಿಗಳ ವೆಬ್‌ಸೈಟ್‌ನಲ್ಲಿ ಲಭ್ಯವಿಲ್ಲದ ಪಕ್ಷದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕರಿಸಲಾಗಿರುವ ಸರ್ಕಾರಿ ವಕೀಲರನ್ನು ಕೂಡಲೇ ಸಂಪರ್ಕಿಸಿ ನ್ಯಾಯಾಲಯದ ಆದೇಶದ ಪ್ರತಿ ಹಾಗೂ ಸದರಿ ಆದೇಶದ ಹಿನ್ನೆಲೆಯಲ್ಲಿ ಸರ್ಕಾರಿ ವಕೀಲರು ನೀಡುವ ಅಭಿಪ್ರಾಯವನ್ನು ವಿಳಂಬವಿಲ್ಲದೇ ಪಡೆಯಲು ಕ್ರಮವಹಿಸತಕ್ಕದ್ದು, ಎಂದು ಉಲ್ಲೇಖ(1)ರ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರಕರಣಗಳು ಇತ್ಯರ್ಥಗೊಂಡಾಗ ಪ್ರಕರಣಕ್ಕೆ ಸಂಬಂಧಿಸಿದ ಆದೇಶಗಳನ್ನು ಪಡೆದು ಕೂಡಲೇ ಇತ್ಯರ್ಥಗೊಳಿಸುವುದು. ಪ್ರಕರಣಕ್ಕೆ ಸಂಬಂಧಿಸಿದ ಆದೇಶದ ಬಗ್ಗೆ ಕೂಡಲೇ ಇತ್ಯರ್ಥಗೊಳಿಸದೆ ಆಗುವ ವಿಳಂಬಕ್ಕೆ ಸಂಬಂಧಿಸಿದ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ. ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ತಮ್ಮ ವಿಶ್ವಾಸಿ

ಆಡಳಿತಾಧಿಕಾರಿಗಳು

ಪ್ರತಿಗಳು:

1. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
2. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ/ರೇಷ್ಮೆ/ಇಂಜಿನಿಯರಿಂಗ್ ಮಹಾವಿದ್ಯಾಲಯಗಳು/ ಸಂಶೋಧನಾ ಕೇಂದ್ರಗಳು/ಕೃಷಿ ಸಂಶೋಧನಾ ಕೇಂದ್ರಗಳು/ಕೃಷಿ ವಿಜ್ಞಾನ ಕೇಂದ್ರಗಳು/ವಿಸ್ತರಣಾ ಘಟಕಗಳು/ ಯೋಜನಾ ಮುಖ್ಯಸ್ಥರುಗಳಿಗೆ.
3. ಕುಲಪತಿಗಳ ಕಾರ್ಯದರ್ಶಿಗಳು, ಕೃಷಿ ವಿಶ್ವವಿದ್ಯಾನಿಲಯ, ಗಾಕೃವಿಕೇ, ಬೆಂಗಳೂರು.
4. ಮುಖ್ಯಸ್ಥರು, AKMU Cell, ಕೃವಿವಿ, ಗಾಕೃವಿಕೇ, ಬೆಂಗಳೂರು – ಕೃವಿವಿ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ
5. ಕಛೇರಿ ಕಡತಕ್ಕೆ

ಪ್ರ. ಪ್ರತಿ

1. ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ(ಸೇವೆಗಳು ಮತ್ತು ಸಮನ್ವಯ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001 (ಸ್ವೀಕೃತಿ ಅಂಚೆಯೊಂದಿಗೆ)